ಅಲ್ಲಿರತಕ್ಕಂಥ ಸಿಬ್ಬಂದಿ ವರ್ಗದವರ ದುಷ್ಕೃತ್ಯದಿಂದಾಗಿ ಸಾವನ್ನಪ್ಪುವ ಹಾಗೆ ಮಾಡಿರತಕ್ಕಂಥ ವಿಚಾರವನ್ನು ಈ ಸದನದ ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದರು. ವಿಚಾರಣೆ ಮಾಡಿದ್ದಾರೆ. ಆದರೆ ಇನ್ನೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿನ ಜಿಲ್ಲಾ ಪರಿಷತ್ತಿನವರು ಆ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಂಥ ನೆಲ ಒರೆಸುವ ಇಬ್ಬರು ಆಯಾಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಅವರ ವ್ಯಾಪ್ತಿಯಲ್ಲಿ ಬರುವಂತೆ ಇವರನ್ನು ಸಸ್ಪೆಂಡ್ ಮಾಡಲು ಮಾತ್ರ ಅವರಿಗೆ ಅಧಿಕಾರ ಇರುವುದೆಂದು ಆ ರೀತಿ ಮಾಡಿದ್ದಾರೆ. ತನಿಖೆಯ ವರದಿ ಇಲ್ಲಿಗೆ ಬಂದಿದೆ. ಮಂತ್ರಿಗಳನ್ನು ಕೇಳಿದಾಗ ಅವರು, ಇನ್ನೂ ಮೂರು ಜನರನ್ನು ಸಸ್ಪೆಂಡ್ ಮಾಡಿದ್ದೇನೆ ಎಂದು ಹೇಳಿದರು. ಇದುವರೆಗೂ ಆ ಆದೇಶ ತೀರ್ಥಹಳ್ಳಿಗೆ ಹೋಗಿಲ್ಲ. ಹಾಗೂ ಯಾರೂ ಕೂಡ ಸಸ್ಪೆಂಡ್ ಆಗಿಲ್ಲ. ಮಹಿಳಾ ವೈದ್ಯಾಧಿಕಾರಿಗಳೂ ಸಸ್ಪೆಂಡ್ ಆಗಿಲ್ಲ ಹಾಗೂ ಅಲ್ಲಿರತಕ್ಕಂಥ ಎ.ಎನ್.ಎಂ.ಗಳೂ ಕೂಡ ಆಗಿಲ್ಲ. ದುರ್ದೈವವೆಂದರೆ ಮೊನ್ನೆಯ ದಿನ ಕೆಲವರು ಒಂದು ಮೆರವಣಿಗೆಯನ್ನು ಮಾಡಿ, ಇಬ್ಬರು ದಲಿತ ನೌಕರರ ಮೇಲೆ ಕ್ರಮವಾಗಿದೆ, ಶಾಸಕರು ಮತ್ತು ಸರ್ಕಾರ ದಲಿತ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ನನ್ನನ್ನು ಮತ್ತು ನಿಮ್ಮನ್ನು ಸೇರಿಸಿ ಹರಾಜು ಹಾಕಿದ್ದಾರೆ. ಯಾರ ಪ್ರಭಾವದಿಂದಾಗಿ ಈ ಕಡತ ಇನ್ನೂ ಇಲ್ಲೇ ಇದೆ, ಅವರ ಮೇಲೆ ಏಕೆ ಸೂಕ್ತ ಕ್ರಮ ಜರುಗಿಸಲು ಆಗಲಿಲ್ಲ? ನೆಲ ಒರೆಸುವವರನ್ನು ಸಸ್ಪೆಂಡ್ ಮಾಡಿದ್ದಾರೆ. ನೆಲ ಒರೆಸುವವರು ಹೆರಿಗೆ ಮಾಡಿಸುವ ಕೆಲಸವನ್ನು ಮಾಡಿ ಯಾರನ್ನಾದರೂ ಕೊಂದಿದ್ದಾರೆ ಎನ್ನತಕ್ಕಂಥಾದ್ದನ್ನು ತಾವು ಒಪ್ಪಿಕೊಳ್ಳುತ್ತೀರಾ ಎನ್ನುವಂಥಾದ್ದನ್ನು ದಯಮಾಡಿ ತಿಳಿಸಬೇಕು. ಇದು ನನ್ನ ಕ್ಷೇತ್ರದ ಸಾರ್ವಜನಿಕ ಮಹತ್ವದ ಸಂಗತಿ. ಇವತ್ತು ಜನ ಭರವಸೆ ಇಟ್ಟು ಸರ್ಕಾರಿ ಆಸ್ಪತ್ರೆಗೆ ಬರುವಂಥ ಪರಿಸ್ಥಿತಿ ಅಲ್ಲಿ ಇಲ್ಲ. ಅಲ್ಲಿರತಕ್ಕಂಥ ಅಯೋಗ್ಯ ಸಿಬ್ಬಂದಿಯನ್ನು ತತ್‌ಕ್ಷಣ ಬದಲಾವಣೆ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ನಾನು ತಿಳಿಯಬಯಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಿತ್ರರು ಹೇಳಿದ ಹಾಗೆ ಈಗಾಗಲೇ ವಿಚಾರಣೆಯಾಗಿದೆ. ವರದಿ ಸರ್ಕಾರಕ್ಕೆ ಬಂದಿದೆ ಎಂದು ಅವರೇ ತಿಳಿಸಿದ್ದಾರೆ. ಮಂತ್ರಿಗಳನ್ನು ಕೇಳಿದಾಗ ಇನ್ನೂ ಮೂರು ಜನರನ್ನು ಅಮಾನತ್ತಿನಲ್ಲಿಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆದ್ದರಿಂದ ನಾಳೆ ಮಂತ್ರಿಗಳು ಈ ಸದನಕ್ಕೆ ಬಂದಾಗ ಅವರೇ ಇದಕ್ಕೆ ಉತ್ತರ ಕೊಡುವಂಥ ಏರ್ಪಾಡು ಮಾಡುತ್ತೇನೆ.

ಹುಬ್ಬಳ್ಳಿಯ ಮೌಲಾನಾ ಆಜಾದ್ ಹೋಮಿಯೋಪತಿ ಮೆಡಿಕಲ್ ಕಾಲೇಜಿನ ಆಡಳಿತ ಮಂಡಳಿಯು ಅಲ್ಲಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ ನಡೆಸುತ್ತಿರುವುದು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾ) : ಸನ್ಮಾನ್ಯ ಉಪಾಧ್ಯಕ್ಷರೇ, ಹುಬ್ಬಳ್ಳಿ ಮಹಾನಗರದಲ್ಲಿ ಮೌಲಾನಾ ಆಜಾದ್ ಹೋಮಿಯೋಪತಿ ಮೆಡಿಕಲ್ ಕಾಲೇಜಿನಲ್ಲಿ ಆಡಳಿತ ಮಂಡಳಿಯು ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ನಡೆಸಿರುವ ದೌರ್ಜನ್ಯ ಮತ್ತು ಲೈಂಗಿಕ ಹಿಂಸೆಯ ಬಗ್ಗೆ ಕಳೆದ ಅಧಿವೇಶನದಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಆ ಸಂದರ್ಭದಲ್ಲಿ ಮಾನ್ಯ ಸಚಿವರು, ವರದಿಯನ್ನು

ತರಿಸಿಕೊಂಡು ಆಡಳಿತ ಮಂಡಳಿಯವರ ಮೇಲೆ ಯೋಗ್ಯ ಕ್ರಮವನ್ನು ಕೈಗೊಳ್ಳುತ್ತೇನೆ ಎಂದು ಭರವಸೆ ಕೊಟ್ಟಿದ್ದರು. ಮತ್ತು ಆಡಳಿತ ಮಂಡಳಿಯನ್ನು ರದ್ದು ಮಾಡುತ್ತೇನೆಂದೂ ಹೇಳಿದ್ದರು. ಇದರ ಬಗ್ಗೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ ಎನ್ನುವುದು ನಮಗೆ ತಿಳಿಯಬೇಕಾಗಿದೆ. ಕಳೆದ 12 ದಿವಸಗಳಿಂದ ಅಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ ಎಂದು ಕೇಳುತ್ತೇನೆ. ಮಾನ್ಯ ಸಚಿವರಾದಂಥ ಎಸ್. ಎಸ್. ಪಾಟೀಲರು ಧಾರವಾಡಕ್ಕೆ ಬಂದಾಗ ಆ ಕಾಲೇಜಿಗೆ ಭೇಟಿ ಕೊಟ್ಟು ಹಲವಾರು ಲೋಪದೋಷಗಳಿದ್ದುದ್ದನ್ನು ಕಂಡಿದ್ದಾರೆ ಮತ್ತು ಕಾಲೇಜಿನ ಒಣಿಯಲ್ಲಿ ಕೆಲವೊಂದು ಬ್ಲೂ ಫಿಲ್ಮ್‌ಗಳು ಮತ್ತು ಹಲವಾರು ಸೆಕ್ಸ್ ಪುಸ್ತಕಗಳೂ ಸಿಕ್ಕಿರುವುದು ಅವರಿಗೆ ಕಂಡು ಬಂದಿರುತ್ತದೆ. ಸಹಕಾರ ಸಚಿವರಿಗೆ ಇದು ವೈಯಕ್ತಿಕವಾಗಿ ಗೊತ್ತಿದ್ದಂಥ ವಿಷಯ. ಅಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬಹಳ ತೊಂದರೆಯಲ್ಲಿದ್ದಾರೆ. ಅಲ್ಲಿಯ ವಿದ್ಯಾರ್ಥಿಗಳಿಗೆ ಬೇರೆ ಕಾಲೇಜುಗಳಿಗೆ ಪ್ರವೇಶ ಕೊಡಬೇಕು ಎಂದು ಅವರ ಬಹು ಮುಖ್ಯವಾದ ಬೇಡಿಕೆಯಾಗಿದೆ. ಈಗಾಗಲೇ ಪರೀಕ್ಷೆಗಳು ಬರುತ್ತಿವೆ. ಅದಕ್ಕಾಗಿ ದಯವಿಟ್ಟು ಮಾನ್ಯ ಸರ್ಕಾರ ಇದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಿ ಆ ವಿದ್ಯಾರ್ಥಿಗಳ ಬದುಕಿಗೆ ಒಂದು ದಾರಿಯನ್ನು ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಹುಬ್ಬಳ್ಳಿಯಲ್ಲಿರುವಂಥ ಮೌಲಾನ ಅಜಾದ್ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಳೆದ 15 ದಿವಸಗಳಿಂದ ತಹಸೀಲ್ದಾರರ ಕಛೇರಿ ಎದುರುಗಡೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಮೊನ್ನೆತಾನೆ ನಾವು ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿದಾಗ ಆ ಕಾಲೇಜಿನ ಮಾನ್ಯತೆ ರದ್ದು ಮಾಡುತ್ತೇವೆ, ಆ ವಿದ್ಯಾರ್ಥಿಗಳಿಗೆ ಬೇರೆ ಕಾಲೇಜಿನಲ್ಲಿ ಪ್ರವೇಶವಕಾಶ ಮಾಡಿಕೊಡುತ್ತೇವೆ ಎನ್ನುವ ಆಶ್ವಾಸನೆ ಸಹಿತ ಕೊಟ್ಟಿದ್ದರು. ನಾನು ಮತ್ತು ಮಾನ್ಯ ಎಸ್.ಎಸ್. ಪಾಟೀಲರು ಆ ಕಾಲೇಜಿಗೆ ಹೋಗಿ ಸುಮಾರು 3 ಗಂಟೆಗಳ ಕಾಲ ಪರಿಶೀಲನೆ ಮಾಡಿದ್ದೇವೆ. ಕಾಲೇಜಿನ ಒಳಗಡೆ ಇರುವಂಥ ಅಂಡರ್‌ಗ್ರೌಂಡ್‌ನಲ್ಲಿ ಇದ್ದಂಥ ವಿ.ಸಿ.ಆರ್., ಟಿ.ವಿ. ಬ್ಲೂಫಿಲಂ ಕ್ಯಾಸೆಟ್‌ಗಳು 50 ರಿಂದ 60 ಕ್ಯಾಸೆಟ್‌ಗಳು ಸಿಕ್ಕಿವೆ. ಇಷ್ಟೆಲ್ಲಾ ಸಿಕ್ಕಿದರೂ ಸಹಿತ, ಅಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಆ ಆಡಳಿತಮಂಡಳಿಯ ಮೇಲೆ ಆಪಾದನೆಗಳನ್ನು ಮಾಡಿರುವ ಬಗ್ಗೆ ನಾನು, ಶ್ರೀ ಎಸ್.ಎಸ್. ಪಾಟೀಲರು, ಡಿ.ಸಿ.ಯವರು ಹಾಗೂ ಕಮೀಷನರ್‌ರವರು ಅಲ್ಲಿಗೆ ಹೋಗಿ ಕಣ್ಣಾರೆ ನೋಡಿಕೊಂಡು ಬಂದಿದ್ದೇವೆ. ಆದ್ದರಿಂದ ಆ ಕಾಲೇಜಿನ ಮಾನ್ಯತೆಯನ್ನು ರದ್ದು ಮಾಡಬೇಕು. ಮತ್ತು ಅಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯವರಿಗೆ ಬೇರೆ ಕಾಲೇಜಿಗೆ ಪ್ರವೇಶಾವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಡಾ|| ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಧೀರ್ಘವಾಗಿ ಚರ್ಚೆಯಾಗಿದೆ. ವಿದ್ಯಾರ್ಥಿಗಳ ಮೇಲೆ ನಡೆಯತಕ್ಕಂಥ ದೌರ್ಜನ್ಯ, ಲೈಂಗಿಕ ಪ್ರಕರಣಗಳ ಬಗ್ಗೆ ನಾವು ಆಗಲೇ ಸಿ.ಬಿ.ಡಿ.ಗೆ ರೆಫರ್ ಮಾಡಿದ್ದೇವೆ. ಅದರ ಬಗ್ಗೆ ತನಿಖೆ ನಡೆಯುತ್ತಿದೆ. ಶ್ರೀ ಜಗದೀಶ್ ಶೆಟ್ಟರ್ ಮತ್ತು ಇತರೆ ನಮ್ಮ

ಸ್ನೇಹಿತರು ಹೇಳಿದ ಹಾಗೆ ಅಲ್ಲಿ ಬ್ಲೂಫಿಲಂ ಏನೂ ಸಿಗಲಿಲ್ಲ. ಅಲ್ಲಿ ಕೇವಲ ಖಾಲಿ ಕ್ಯಾಸೆಟ್‌ಗಳು ಇದ್ದವು ಎಂದು ಮಾನ್ಯ ಮಂತ್ರಿಗಳು ನನಗೆ ಹೇಳಿದರು. ಅಲ್ಲಿ ಬ್ಲೂಫಿಲಂ ಕ್ಯಾಸೆಟ್‌ಗಳು ಇದ್ದವು ಎನ್ನುವುದು ಬರೀ ಸುಳ್ಳು. ಅಲ್ಲಿ ಅಂಥದ್ದು ಯಾವುದೂ ಕಂಡುಬಂದಿಲ್ಲ. ಅಲ್ಲಿ ಖಾಲಿ ಕ್ಯಾಸೆಟ್ಟುಗಳು ಇದ್ದವು ಮತ್ತು ಅವು ಯಾರಿಗೆ ಸಂಬಂಧಿಸಿದ್ದು ಎಂದು ನಮಗೆ ಗೊತ್ತಿಲ್ಲ. ಆದರೆ ಆ ಬಗ್ಗೆ ಸಂಬಂಧಪಟ್ಟ ಇಲಾಖೆಯ ಉಪನಿರ್ದೇಶಕರನ್ನು ಆ ಮಹಾವಿದ್ಯಾಲಯಕ್ಕೆ ಕಳುಹಿಸಿ ಅವರಿಂದ ವರದಿಯನ್ನು ಪಡೆಯಲಾಗಿದೆ. ಹಾಗೂ ರಾಜೀವಗಾಂಧಿ ವಿಶ್ವವಿದ್ಯಾಲಯದಿಂದ ಒಂದು ಸಮಿತಿಯನ್ನು ಅಲ್ಲಿಗೆ ಕಳುಹಿಸಿ ಅವರಿಂದಲೂ ಸಹ ಒಂದು ವರದಿಯನ್ನು ಪಡೆಯಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಧಾರವಾಡ ಜಿಲ್ಲೆಯ ಪೊಲೀಸ್ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಈಗ ಆ ವಿದ್ಯಾರ್ಥಿ ವಿದ್ಯಾರ್ಥಿನಿಯವರಿಗೆ ಸೂಕ್ತ ರಕ್ಷಣೆ ಸಹ ನೀಡಲಾಗಿದೆ. ಅಲ್ಲಿಯ ವಿದ್ಯಾರ್ಥಿಗಳ ಬೇಡಿಕೆ ಪ್ರಕಾರ ಸದರಿ ಮಹಾವಿದ್ಯಾಲಯದ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕರ್ನಾಟಕದ ಇತರೇ ಹೋಮಿಯೋಪತಿ ವೈದ್ಯ ಮಹಾವಿದ್ಯಾಲಯಗಳಿಗೆ ವರ್ಗಾಯಿಸಲು ನಿರ್ಧರಿಸಿದ್ದು ಈ ಬಗ್ಗೆ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ ಆಡಳಿತ ಮಂಡಳಿಯ ಸಭೆಯನ್ನು ದಿನಾಂಕ 13-4-1998ರಂದು ನಡೆಸಿ ಅವರಿಂದ ಈ ಬಗ್ಗೆ ಒಪ್ಪಿಗೆಯನ್ನು ಪಡೆಯಲಾಗಿದೆ ಮತ್ತು ಕೇಂದ್ರೀಯ ಹೋಮಿಯೋಪತಿ ವೈದ್ಯಕೀಯ ಪರಿಷತ್ತು ಇಲ್ಲಿಗೆ ಈ ಬಗ್ಗೆ ಅನುಮತಿ ಕೋರಿ ಪತ್ರವನ್ನೂ ಸಹ ಬರೆಯಲಾಗಿದೆ. ಇನ್ನು ಒಂದು ಅಥವಾ ಎರಡು ದಿನಗಳಲ್ಲಿ ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ರಾಜ್ಯದ ಇತರ ಹೋಮಿಯೋಪತಿ ಕಾಲೇಜುಗಳಿಗೆ ವರ್ಗಾಯಿಸುವ ಬಗ್ಗೆ ಸರ್ಕಾರದಿಂದ ಆದೇಶ ಹೊರಡಿಸಲಾಗುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಇದೇ ವಿಷಯದ ಮೇಲೆ ಅಲ್ಲಿಯ ಆಡಳಿತ ಮಂಡಳಿಯ ಮೇಲೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳಬಾರದೆಂದು ಆಡಳಿತಮಂಡಳಿಯವರು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಆ ದಿನ ಅಲ್ಲಿ ಶ್ರೀ ಗೋಪಿನಾಥ ಸಾಂಡ್ರಾ ಅವರೂ ಕೂಡ ಇದ್ದರು. ನಾನೂ ಕೂಡ ಅದೇ ದಿವಸ ಕೋರ್ಟಿನಲ್ಲಿ ಹಾಜರಿದ್ದೆ. ಆ ಸ್ಟೇ ಅನ್ನು ವೆಕೇಟ್ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ತಮ್ಮ ಉತ್ತರದಲ್ಲಿ ಎಲ್ಲೂ ಹೇಳಿಲ್ಲ. ಏಕೆ?

ಡಾ|| ಎಂ. ಶಂಕರನಾಯಕ್ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಆಡಳಿತ ಮಂಡಳಿ ಏನು ಇದೆ ಅದನ್ನು ಬದಲಾಯಿಸುವುದಕ್ಕಾಗಿ ಏನು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿ ಅದರ ಬಗ್ಗೆ ಸ್ಟೇ ತೆಗೆದುಕೊಂಡಿರುವಂಥದ್ದು ಅದು ನಮಗೆ ಮಾಹಿತಿ ಬಂದಿಲ್ಲ. ಆದರೆ ಕಾನೂನುಬದ್ಧವಾಗಿ ಅದಕ್ಕೆ ಏನೂ ಸಂಬಂಧ ಇಲ್ಲ ಯೂನಿವರ್ಸಿಟಿ ಏನು ಕ್ರಮ ತೆಗೆದುಕೊಳ್ಳುತ್ತದೆ....

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಸ್ಟೇ ಇದ್ದಾಗ ಆಡಳಿತ ಮಂಡಳಿಯ ಬದಲಾವಣೆ ಹೇಗೆ ಮಾಡುತ್ತಾರೆ? ಆ ಸ್ಟೇ ಅನ್ನು ವೆಕೇಟ್ ಮಾಡುವುದಕ್ಕೆ ಸರ್ಕಾರದ ಪರವಿಯಿಂದ ಪ್ರಯತ್ನ ಮಾಡಬೇಕಲ್ಲವೇ?

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಅಲ್ಲಿಯ ಆಡಳಿತವರ್ಗದವರು ಹೈಕೋರ್ಟಿಗೆ ಹೋಗಿ ರಿಟ್ ಅರ್ಜಿಯನ್ನು ದಾಖಲೆ ಮಾಡಿ ಸರ್ಕಾರ ತೆಗೆದುಕೊಳ್ಳುತ್ತಿರತಕ್ಕಂಥ ಕ್ರಮಕ್ಕೆ ಏನಾದರೂ ತಡೆಯಾಜ್ಞೆ ತೆಗೆದುಕೊಂಡಿದ್ದರೆ, ಅಡ್ವೊಕೇಟ್ ಜನರಲ್ ರವರನ್ನು ಕಳುಹಿಸಿ ಅದರ ಸಂಪೂರ್ಣವಾದ ಮಾಹಿತಿಯನ್ನು ತರಿಸಿ, ಅಂಥ ಸಂಸ್ಥೆಗಳ ಮಾನ್ಯತೆಯನ್ನು ಪರ್ಮನೆಂಟ್ ಆಗಿ ರದ್ದುಮಾಡಲಿಕ್ಕೆ ಇರತಕ್ಕಂಥದ್ದಕ್ಕೆ ಕ್ರಮವನ್ನು ಸರ್ಕಾರದ ವತಿಯಿಂದ ಕೈಗೊಳ್ಳುತ್ತೇವೆ ಎಂದು ಈ ಸದನಕ್ಕೆ ಆಶ್ವಾಸನೆಯನ್ನು ಕೊಡುತ್ತೇನೆ.

ಹೊಸ ಪಡಿತರ ಚೀಟಿಗೆ ಭಾವಚಿತ್ರ ಹಾಗೂ ಇತರ ಮಾಹಿತಿಗಳನ್ನು ನೀಡಲು ಕಾಲಾವಕಾಶ.

ಶ್ರೀ ಕುಂಬೆ ಸುಂದರರಾವ್ (ಸುರತ್ಕಲ್) : ಮಾನ್ಯ ಉಪಾಧ್ಯಕ್ಷರೆ, ಕಳೆದ ಬಾರಿ ಈ ಸದನದ ಕೊನೆಯ ದಿವಸ ಹೊಸ ಪಡಿತರ ಚೀಟಿಯನ್ನು ಪಡೆಯಲು ಅದಕ್ಕೆ ಬೇಕಾದ ಫೋಟೋ ಮತ್ತಿತರ ಮಾಹಿತಿಗಳನ್ನು ಪುನಃ ಹೊಂದಿಸಿಕೊಳ್ಳುವುದಕ್ಕೆ ಜನರಿಗೆ ಕಷ್ಟವಾಗುವುದರಿಂದ ಸ್ವಲ್ಪ ಹೆಚ್ಚಿಗೆ ಕಾಲಾವಕಾಶ ಕೊಡಬೇಕು ಎಂದು ಪ್ರಸ್ತಾಪ ಮಾಡಿದ್ದೆ. ಹೊಸ ಪಡಿತರ ಚೀಟಿ ಪಡೆಯಲು ಕಳೆದ ತಿಂಗಳ 4ನೇ ತಾರೀಖು ಕೊನೆಯ ದಿವಸವಾಗಿತ್ತು. ಎಷ್ಟು ಕಾಲಾವಕಾಶ ಬೇಕು ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕೇಳಿದಾಗ 2 ತಿಂಗಳಾದರೂ ಕಾಲಾವಕಾಶ ಬೇಕು ಎಂದು ಕೇಳಿದ್ದೆ. 2 ತಿಂಗಳ ಕಾಲಾವಕಾಶ ಬೇಕು ಎಂದು ಕೇಳಿದಾಗ ಈಗ ಸದನದಲ್ಲಿ ಮಾನ್ಯ ಆಹಾರ ಇಲಾಖೆಯ ಸಚಿವರು ಹೇಗೆ ಇಲ್ಲವೋ ಹಾಗೆಯೇ ಆ ದಿನವೂ ಸಹ ಅವರು ಸದನದಲ್ಲಿ ಇರಲಿಲ್ಲ. ನಾನು ಕಾಲಾವಕಾಶ ಕೇಳಿದ್ದನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸರ್ಕಾರದ ಪರವಾಗಿ ಒಪ್ಪಿಕೊಂಡಿದ್ದರು. 2 ತಿಂಗಳ ಅವಕಾಶ ಕೇಳುತ್ತಿದ್ದೀರಿ, ನೀವು ಆ ಕಾಯಿದೆಯನ್ನು ಬದಲಾಯಿಸಬೇಕು ಎಂದು ಹೇಳುತ್ತಿಲ್ಲ, ನಿಮ್ಮ ಸಲಹೆಯನ್ನು ಒಪ್ಪಬಹುದು ಸುಂದರರಾಯರೇ ಎಂದು ಹೇಳಿದರು. ನನ್ನ ಈ ಮಾತು ಏನು ಇದೆ ಅದು ನಮ್ಮ ಜಿಲ್ಲೆಯಲ್ಲಿ ನನ್ನ ಹೆಸರಿನ ಸಮೇತ ಪತ್ರಿಕೆಯಲ್ಲಿ ಪ್ರಚಾರವಾಯಿತು. ಆದರೆ ಈ ಸರ್ಕಾರದ ಒಪ್ಪಿಗೆ ಏನು ಇದೆ ಅಲ್ಲಿನ ಅಧಿಕಾರಿಗಳಿಗೆ ತಲುಪಲಿಲ್ಲ. ಅದರ ಪರಿಣಾಮವಾಗಿ 2 ತಿಂಗಳ ಕಾಲಾವಕಾಶವನ್ನು ಕೊಡುವುದನ್ನು ಸರ್ಕಾರ ಸದನದಲ್ಲಿ ಒಪ್ಪಿದೆ ಎನ್ನುವುದು ನಾನು ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ತಿಳಿಸಿದೆ. ಆದರೂ ಸಹ ರೇಷನ್ ಅಂಗಡಿಗಳಲ್ಲಿ ಈಗ ಯಾರಿಗೂ ರೇಷನ್ ಕೊಡುತ್ತಿಲ್ಲ. ಮಾನ್ಯ ಉಸ್ತುವಾರಿ ಸಚಿವರು ನಮ್ಮ ಕ್ಷೇತ್ರಕ್ಕೆ ಬಂದಿದ್ದರು. ದಯಮಾಡಿ ಮಾನ್ಯ ಉಸ್ತುವಾರಿ ಸಚಿವರು ಇದನ್ನು ಗಮನಿಸಬೇಕು. ನಮ್ಮಲ್ಲಿಯ ರೇಷನ್‌ದಾರರಿಗೆ, ಜನರಿಗೆ ಈ ರೀತಿ ತೊಂದರೆ ಆಗಿದೆ ಎಂದು ಮಾನ್ಯ ಉಸ್ತುವಾರಿ ಸಚಿವರಿಗೆ ಹೇಳಿದೆ. ಆಗ ನಾನು ಡಿ.ಸಿ.ಯವರಿಗೆ ತಿಳಿಸುತ್ತೇನೆ, ನೀವು ಯೋಚನೆ ಮಾಡಬೇಡಿ ಸುಂದರಾಯರೇ' ಎಂದು ಅವರು ಹೇಳಿದರು. ಆದರೆ ಡಿ.ಸಿ.ಯವರು ಅವರಿಗೆ ಸಿಗಲಿಲ್ಲ. ಡಿ.ಸಿ.ಯವರಿಗೆ ತಿಳಿಸಿ ಎಂದು ಅವರು ಕಾರ್ಪೋರೇಷನ್ ಕಮಿಷನ್‌ರವರಿಗೆ ಹೇಳಿದರು. ಇಷ್ಟು ಆದಮೇಲೂ ಇವತ್ತೂ ಸಹ ಸರ್ಕಾರದ ಆಶ್ವಾಸನೆ ಏನು ಇದೆ ಅದನ್ನು ರೇಷನ್ ಅಧಿಕಾರಿಗಳು ಅನುಸರಿಸುತ್ತಿಲ್ಲ. ಫೋಟೋ ಮತ್ತು ಇತರ ಮಾಹಿತಿಗಳನ್ನು